B. Monthwise programme for the year 1988-89

1		2	3
April	1988	26.41	5.05
May	1988	26.78	8.90
June	1988	34.29	9.05
July	1988	22.03	12.55
August	1988	20.54	20.80
September	1988	20.54	24.30
October	1988	24.55	29.30
November	1988	37.04	28.55
December	1988	48.55	28.73
January	1989	51.20	26.08
February	1989	55.33	21.80
March	1989	57.74	34.89
Total :		425.00	250.00

ಚಿತ್ತಾಪುರ ತಾಲ್ಲೂಕಿನ ಮಾದಗೋಳ ಕೊಡಲಿ ರಸ್ತೆಯ ಡಾಂಬರೀಕರಣದ ಕೆಲಸ ಪ್ರಾರಂಭಿಸುವುದು

೧೫೯೭ (೨೫೮೬) ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಮಾದಗೋಳ ಕೊಡಲಿ ರಸ್ತೆಯ ಡಾಂಬರೀಕರಣದ ಕೆಲಸ ಪ್ರಾರಂಭವಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮುಗಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—ಅ) ಮತ್ತು ಆ),—ಈ ರಸ್ತೆಯನ್ನು ಈಗಾಗಲೇ ೫ ಕಿ.ಮೀ. ಉದ್ದ ಡಾಂಬರು ರಸ್ತೆಯಾಗಿದ್ದು, ಉಳಿದ ರಸ್ತೆಯ ಕೆಲವು ಭಾಗಗಳಿಗೆ ಡಾಂಬರು ಹಾಕಲು ಉದ್ದೇಶಿಸಲಾಗಿದೆ. ಹಣದ ಲಭ್ಯತೆಗನುಸಾರವಾಗಿ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಚಿತ್ತಾಪುರ ತಾಲ್ಲೂಕಿನ ಭಾಗೋಡಿ ಗ್ರಾಮದ ಹತ್ತಿರ ಪ್ರವಾಹ ನಿಯಂತ್ರಣ ಗೋಡೆ ಕಟ್ಟುವ ಕುರಿತು

೧೫೯೮ (೨೫೮೭) ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ).—ಮಾನ್ಯ ಲೋಕೋಪಯೋಗಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೭-೮೮ನೇ ಸಾಲಿನಲ್ಲಿ ಚಿತ್ತಾಪುರ ತಾಲ್ಲೂಕಿನ ಬಾಗೋಡಿ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಪ್ರವಾಹ ನಿಯಂತ್ರಣ ಗೋಡೆ ಕಟ್ಟುವ ಕೆಲಸ ಮಂಜೂರಾಗಿರುವುದು ನಿಜವೇ ?